ಹಾಗೇ ಬರುತ್ತಿತ್ತು. ಅದು ಇನ್ನೇನು ನಮ್ಮ ಹತ್ತಿರ ಬರುತ್ತದೆ ಎನ್ನುವಾಗ ನಾವು ಸೈಕಲ್ ಮೇಲೆ ಜೋರಾಗಿ ಪೆಡ್ಲು ತುಳಿಯುತ್ತ, 10 ಗಂಟೆ ಬಸ್ಸನ್ನೇ ಹಿಂದೆ ಹಾಕುತ್ತಾ, ತಿರುವುಗಳಲ್ಲಿ ಮಜಾ ಹೊಡೆಯುತ್ತಾ ಬಸ್ ಸ್ಟಾಪಿಗೆ ಬಂದರೆ ಬಸ್ಸಿಗೆ ಕಾದು ಕುಳಿತ ಜನ 'ಅಲೆಲೆ... ಬಸ್ಸನ್ನು ಹಿಂದಿಕ್ಕಿ ಬಂದ ಶೂರ' ಎಂಬಂತೆ ನಮ್ಮನ್ನು ನೋಡುತ್ತಿದ್ದರು. ನಾವು ಸಿಕ್ಕೇವೆಂದು ಹಿರಿಯರಿಗೆ ಅಂಜಿ ಶಾಲೆ ಮುಂದಿನ ದಿಬ್ಬದ ರಸ್ತೆ ಏರಿ ಸೀದಾ ನಮ್ಮ ಮುದೇನೂರು ಕೆರೆಗೇ ನಮ್ಮ ಸೈಕಲ್ ಇಳಿಸಿ ಅದನ್ನು ತಿರುಗಿಸಿ ನೀರು ಚಿಮ್ಮಿಸಿ ನಾವೂ ಸ್ನಾನ ಮಾಡಿ ಸೈಕಲ್ಲನ್ನೂ ಸ್ನಾನ ಮಾಡಿಸಿ ನಿಧಾನಕ್ಕೆ ಹಿಂದಿರುಗುತ್ತಿದ್ದೆವು. ಹಾಗೆ ಹಿಂದಿರುಗುವಾಗ ದೆವ್ವದ ಭಯನೋ, ಭಕ್ತಿಯೋ ನಮ್ಮ ಸುಡುಗಾಡದ ಕಡೆ ಕೈಮುಗಿದು ಹಾರಿ 'ಬಬ್ರುವಾಹನ' ಕವರಿದ್ದ ಸೀಟಿನ ಮೇಲೆ ಕುಳಿತು ಕುದುರೆ ಮೇಲೆ ಬಂದಂತೆ ಬಂದು ನಮ್ಮನಮ್ಮ ಅಡುಗೆ ಮನೆ ಸೇರುತ್ತಿದ್ದೆವು. ಅವ್ವಂದಿರ ಚಿಬ್ಬಲಿ ಬಿಸೀರೊಟ್ಟಿಗಾಗಿ ನಮ್ಮೊಡಲು ಹಸಿದು ಕಾಯುತ್ತಿದ್ದು. ಅವ್ವನೂ ಎಡ ಅಂಗೈಯಲ್ಲಿ ಹೊಳೆವ ಹುಣ್ಣಿಮೆ ಚಂದ್ರನಂತಹ ರೊಟ್ಟಿ ಹಿಡಿದು, ಬೆಳ್ಳುಳ್ಳಿ, ಉಪ್ಪು, ಜೀರಿಗಿ ಬೆರೆಸಿದ ಹುರಿದ ಹಸಿಮೆಣಸಿನಕಾಯಿ ಹಿಂಡಿಗೆ ಎಣ್ಣೆ ಬೆರೆಸಿ ಒಂದೆರೆಡು ರೊಟ್ಟಿಗೆ ಸವರಿ ಸುರುಳಿ ಸುತ್ತಿ ನೀಡಿದರೆ ಆಹಾ... ಸ್ವರ್ಗಸುಖವೇ!

ಮೂಗು ಮುಸುಡಿ ಕೈಬಾಯಿ ಎಲ್ಲವೂ ತಣ್ಣನೆಯ ಉರಿಉರಿ ಆದರೂ ಕಂಪು ಇಂಪಿನ ಬಾಳ ಚೆಲುವು. ಅತ್ತ ಇದೇ ಈ ಹತ್ತು ಗಂಟೆಯ ಅರ್ಥಾತ್ ಕಟ್ ಸರ್ವಿಸ್ ಬಸ್ಸು ಕೂಸನ್ನು ಹಿರಿಕಿರಿಯರನ್ನು ಹಾಕಿಕೊಂಡು ಕೋಳಿಕುರಿ ಮುದುಕ ಮುದುಕಿ ಎಲ್ಲರನ್ನೂ ತನ್ನ ಹೊಟ್ಟೆಗೆ ಹಾಕಿಕೊಂಡು ಮೈಸೂರು ಮಹಾರಾಜನಂತೆ ಸೀದಾ ನಮ್ಮೂರಿನಿಂದ ಹೊರಟು ನಂದಿಹಳ್ಳಿ ಸೋಗಿ ಸುತ್ತಿ ಕ್ರಾಸು ತಿರುವು ಬಳಸಿ ಒಂದು ರೀತಿಯ ಗುಡ್ಡದ ಮೇಲಿಂದ ಏದುಸಿರು ಬಿಡುತ್ತಾ ಮುದೇನೂರೆಂಬೋ ಮುದೇನೂರಿಗೆ ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರಿಜೋಗಿ'ಯಂತೆ ಬರುತ್ತಿತ್ತು. ನಾವದನ್ನು ತದೇಕಚಿತ್ತದಿಂದ ಹಡಗಲಿಗೆ ಹೋಗುವವರೆಗೂ, ಮರೆಯಾಗುವವರೆಗೂ ನಮ್ಮ ನೆಟ್ಟ ಕಣ್ಣಿಂದ ಬಸ್ಸು ನೋಡಿದ್ದೇ ನೋಡಿದ್ದು. ಆಕಸ್ಮಾತ್ ಬಸ್ಸು ಕೆಟ್ಟು ನಿಂತರೆ, ಅರ್ಧ ಊರವರನ್ನೆಲ್ಲ ಸೇರಿಸಿ ಬಸ್ಸನ್ನು ತಳ್ಳಿ ಚಾಲು ಮಾಡಿಬಿಡುತ್ತಿದ್ದೆವು. ಆಗ ಇದಕ್ಕೆಂದೇ ಒಂದು ಮೀಸಲು ಪಡೆಯೇ ಇತ್ತು!

ಅವಾಗೆಲ್ಲ ಡ್ರೈವರ್ ಕಂಡೆಕ್ಟರ್ ಪಾಡು ಹೇಳತೀರದು. ಬಸ್‌ನ ತಳದಲ್ಲಿ ಹೊಕ್ಕು ಎಲ್ಲ ರಿಪೇರಿ ಗಿಪೇರಿ ಮುಗಿಸಿ ಹೊರಬಂದಾಗ ಮುಖ ಮಾರಿಯಲ್ಲ ಕರ‍್ರಗೆ ಎಣ್ಣೆ ಬಳಿದುಕೊಂಡು ಮೇಲೆ ಮಣ್ಣು ಹೊದ್ದುಕೊಂಡು ನಿಂತರೆ ನಮಗೆ ಅಯ್ಯೋ ಪಾಪ ಎನಿಸುತ್ತಿತ್ತು. ನಾವು ಅವರ ಬಕೀಟಿನಲ್ಲಿ ಕೈಪಂಪಿನಿಂದ ನೀರು ತಂದು ಕೊಟ್ಟರೆ ಮನದಲ್ಲಿ ಈ ಪುಣ್ಯಾತ್ಮರನ್ನು ಸ್ಮರಿಸಿ ಒಂದಿಷ್ಟು ನೀಟಾಗಿರುತ್ತಿದ್ದರು. ತಲೆಗೆ ನೀರುಹೊಯ್ದುಕೊಂಡು ನೀಟಾಗಿ ಬಸ್ಸಿನ ಕನ್ನಡಿಯಲ್ಲಿ ತಲೆಗೂದಲ ಬಾಚಿಕೊಳ್ಳುತ್ತಿದ್ದರು. ತಾವು ಫಸ್ಟ್ ಏಡ್ ಬಾಕ್ಸ್‌ನಲ್ಲಿ ಇಟ್ಟುಕೊಂಡಿದ್ದ ಪಾಂಡ್ಸು ಪೌಡರ್ ತೆಗೆದು ಮುಖಮೈಗೆ ಹಚ್ಚಿಕೊಂಡು ಅಮಿತಾಬ್ ಬಚ್ಚನ್‌ನಂತೆ ಇಬ್ಬರೂ ಬಸ್ಸು ಚಾಲೂ ಮಾಡಿಕೊಂಡು ಹೊರಡುತ್ತಿದ್ದರು. ನಾವು ಮಾಡುತ್ತಿದ್ದ ಹಲವು ಉಪಕಾರಗಳಿಗೆ ಆಗಾಗ ನಮಗೆ ಹತ್ತೋ, ಇಪ್ಪತ್ತೋ ಪೈಸೆ ಸಿಗುತ್ತಿತ್ತು. ನಾವೆಂದಿಗೂ ಬೇಡುತ್ತಿರಲಿಲ್ಲ. ಅವರ ಪ್ರೀತಿ. ಅಲ್ಲಿಯೇ ಓಡಿ ಹತ್ತುಪೈಸೆಗೆ ಐದು ಉದ್ದನೆಯ ಹಳದಿ ಸಂಡಿಗೆ ತಗೊಂಡು ನಮ್ಮ ಐದೂ ಬೆರಳಿಗೆ ಸಿಕ್ಕಿಸಿಕೊಂಡು ಇಡೀ ಬಸ್ಸಿಗೆ ತೋರಿಸುತ್ತಾ, ಸುತ್ತ ಕುಣಿಯುತ್ತಾ ಖುಷಿಯಿಂದ ಊರು ಸುತ್ತಾಡಿದ್ದೇ ಸುತ್ತಾಡಿದ್ದು. 'ಅಲೇ ಇವುನಾ... ಇವುಕೇನಾಗೈತಲೇ, ಚೋಳು ಕಡದಂಗ ಮಾಡ್ತಾವು' ಅಂತ ಯಾರದರೂ ಅಂದ್ರೆ, ಅವರ ಮುಂದೆಯೇ ಮುಖಕ್ಕೆ ಹೊಡೆದ ಹಾಗೆ ಕುಣಿದು ಕುಪ್ಪಳಿಸಿ ಅಲ್ಲಿ ದೂಳೆಬ್ಬಿಸಿ ಬರುತ್ತಿದ್ದೆವು.

ನನಗೆ ಯಾರಾದರೂ 'ಲೇ ಡುಮ್ಮಾ' ಅಂದ್ರೆ ಕತೀ ಮುಗೀತು ಕೆಟ್ಟದಾಗಿ ಬೈದು ಅವ್ವನ ಹತ್ತಿರ ಓಡಿಹೋಗಿ ಚಾಡಿಹೇಳಿ ಅಳುತ್ತಿದ್ದೇನೋ... ಅವ್ವ ತಲೆನೇವರಿಸಿ ಮುದ್ದುಮಾಡಿ ಸೀರೆಸೆರಗಿನಲ್ಲಿ ಕಣ್ಣೀರು ಒರೆಸಿ ಬೆಲ್ಲದ ಚಾ ಕುಡಿಸಿ ಅಲ್ಲೇ ಆಡಲು ಕಳಿಸುತ್ತಿದ್ದಳು. ಹೀಗೆ ಹತ್ತು ಗಂಟೆ ಬಸ್ಸು ನಮ್ಮ ಜೀವನದ ಸೌಭಾಗ್ಯ ಎಂಬಂತೆ ಒದಗಿ ಬಂದದ್ದು ಮಾತ್ರ ಕಾಕತಾಳೀಯವಲ್ಲದಿದ್ದರೂ ನಮಗೆ ದೇವರು ಕೊಟ್ಟ ವರವೇ ಆಗಿತ್ತದು.

ಬಹುತೇಕ ನಾವು ನಮ್ಮ ಹಿರಿಯರ ಕೈ ಹಿಡಿದು ಹೊರಟರೆ ಒಂದು ಕಿಲೊಮೀಟರ್ ಅಲ್ಲ, ಎಂಟ್ಹತ್ತು ಕಿಲೋಮೀಟರ್ ಸುಗಮವಾಗಿ